**ಮಂಡ್ಯ ಮತ್ತು ಬಳ್ಳಾರಿ ಜಿಲ್ಲೆಗಳಿಗೆ ಮಂಜೂರು ಮಾಡಿರುವ ವಿಶೇಷ ಯೋಜನೆಗಳು**

3474 (3897) : ಶ್ರೀ ಶಿವಣ್ಣನವರ್ ಬಸವರಾಜ್ ನೀಲಪ್ಪ (ಹಾವೇರಿ) ಮಾನ್ಯ ಯೋಜನಾ, ಸಾಂಸ್ಥಿಕ ಹಣಕಾಸು ಮತ್ತು ಸಾಂಖ್ಯಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮಂಡ್ಯ ಮತ್ತು ಬಳ್ಳಾರಿ ಜಿಲ್ಲೆಗಳಿಗೆ ಸರ್ಕಾರವು ಮಂಜೂರು ಮಾಡಿರುವ ವಿಶೇಷ ಯೋಜನೆಗಳಾವುವು?

ಆ) ಮೇಲೆ ತಿಳಿಸಿರುವ ಮುಂದುವರೆದ ಜಿಲ್ಲೆಗಳಿಗೆ ಮಂಜೂರು ಮಾಡಿರುವಂತೆ ಹಿಂದುಳಿದ ಜಿಲ್ಲೆಗಳಾದ ಹಾವೇರಿ, ಕೊಪ್ಪಳ ಮತ್ತು ಚಾಮರಾಜನಗರ ಜಿಲ್ಲೆಗಳಿಗೆ ವಿಶೇಷ ಯೋಜನೆಗಳನ್ನು (Special packages) ಸರ್ಕಾರವು ಮಂಜೂರು ಮಡಲಾಗುವುದೇ? ಹಾಗಿದ್ದಲ್ಲಿ, ಯಾವಾಗ ಮಂಜೂರು ಮಾಡಲಾಗುವುದು?

ಶ್ರೀ ಆರ್.ಬಿ. ತಿಮ್ಮಾಪುರ (ಯೋಜನಾ, ಸಾಂಸ್ಥಿಕ ಹಣಕಾಸು ಮತ್ತು ಸಾಂಖ್ಯಿಕ ಸಚಿವರು)

ಅ) ಬಳ್ಳಾರಿ ಜಿಲ್ಲೆಗೆ ರೂ. 3315.70 ಕೋಟಿ ಅಂದಾಜು ವೆಚ್ಚದಲ್ಲಿ ವಿಶೇಷ ಯೋಜನೆಗಳು ಮಂಜೂರಾಗಿವೆ. ಇದರಲ್ಲಿ ಕುಡುತಿನಿಯಲ್ಲಿ 500 ಮೆಗಾವಾಟ್ಸ್ ಸಾಮರ್ಥ್ಯವುಳ್ಳ ವಿಜಯನಗರ ಥರ್ಮಲ್ ಪವರ್ ಸ್ಟೇಷನ್ ಸ್ಥಾಪನೆ, ಬಳ್ಳಾರಿ ನಗರ ಪ್ರದೇಶಕ್ಕೆ ಕುಡಿಯುವ ನೀರಿನ ಹೆಚ್ಚಳ ಯೋಜನೆ, ಒಳಚರಂಡಿ ವ್ಯವಸ್ಥೆ, ವಿದ್ಯುಚ್ಛಕ್ತಿ ಉಪಕೇಂದ್ರ ಸ್ಥಾಪನೆ, ಬಳ್ಳಾರಿ ನಗರದಲ್ಲಿ 1800 ನಿವೇಶನಗಳ ವಿತರಣೆಗೆ ಅಭಿವೃದ್ಧಿ ಯೋಜನೆ, ಬಳ್ಳಾರಿ ನಗರ ಸುತ್ತ ವಲಯ ರಸ್ತೆ ನಿರ್ಮಾಣ, ಸಣ್ಣ ನೀರಾವರಿ ಯೋಜನೆಗಳು, 233 ಗ್ರಾಮೀಣ ವಾಸಸ್ಥಳಗಳಿಗೆ ಕುಡಿಯುವ ನೀರಿನ ಸರಬರಾಜು ಉನ್ನತೀಕರಣ, ಪ್ರಾಥಮಿಕ ಆರೋಗ್ಯ ಮತ್ತು ಪ್ರಾಥಮಿಕ ಶಿಕ್ಷಣ ಕ್ಷೇತ್ರಗಳಲ್ಲಿ ಸುಧಾರಣೆಗಳು, ಇತ್ಯಾದಿ ಸೇರಿವೆ.

ಮಂಡ್ಯ ಜಿಲ್ಲಾ ಪ್ಯಾಕೇಜ್ ಮೊದಲನೇ ಹಂತದಲ್ಲಿ ಸಮಗ್ರ ರಸ್ತೆಗಳ ಅಭಿವೃದ್ಧಿಗೆ ರೂ. 100 ಕೋಟಿಗಳ ಕಾರ್ಯಕ್ರಮ ಮಂಜೂರಾಗಿದೆ.

ಆ) ಕೊಪ್ಪಳ ಜಿಲ್ಲೆಗೆ ರೂ. 100 ಕೋಟಿ ಅಂದಾಜು ವೆಚ್ಚದಲ್ಲಿ ವಿಶೇಷ ಕಾರ್ಯಕ್ರಮಗಳ ಮಂಜೂರಾತಿ ಪರಿಶೀಲನೆಯಲ್ಲಿದೆ.

ಚಾಮರಾಜನಗರ ಮತ್ತು ಹಾವೇರಿ ಜಿಲ್ಲೆಗಳಿಗೆ ಸಧ್ಯಕ್ಕೆ ಯಾವ ಪ್ರಸ್ತಾವನೆಯು ಇಲ್ಲ.

**ರಾಜ್ಯದಲ್ಲಿ ಹೊಸದಾಗಿ ಶಿಕ್ಷಕರ ತರಬೇತಿ ಕೇಂದ್ರಗಳು**

3497 (4095) : ಶ್ರೀ ಅಮರೇಗೌಡ ಪಾಟೀಲ್ ಬಯ್ಯಾಪುರ (ಲಿಂಗಸೂಗೂರು) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಹೊಸದಾಗಿ ಶಿಕ್ಷಕರ ತರಬೇತಿ ಕೇಂದ್ರಗಳನ್ನು ಮಂಜೂರು ಮಾಡಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು; ಹಾಗೂ ಮಂಜೂರಾತಿಯನ್ನು ಕೋರಿ ಯಾವ ಯಾವ ಜಿಲ್ಲೆಗಳಿಂದ ಎಷ್ಟು ಅರ್ಜಿಗಳು ಸರ್ಕಾರಕ್ಕೆ ಬಂದಿರುವೆ

ಆ) ರಾಯಚೂರು ಜಿಲ್ಲೆಯಿಂದ ಬಂದಿರುವ ಅರ್ಜಿಗಳು ಎಷ್ಟು; ಅವು ಯಾವ ಸಂಸ್ಥೆಗೆ ಸೇರಿವೆ ಹಾಗೂ ಹೊಸ ಶಿಕ್ಷಕರ ತರಬೇತಿ ಕೆಂದ್ರಗಳನ್ನು ಯಾವಾಗ ಮಂಜೂರು ಮಾಡಲಾಗುವುದು?

ಶ್ರೀ ಪ್ರೋ .ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು)

ಅ) ಈಗಾಗಲೇ ಸರ್ಕಾರದ ಆದೇಶ ಸಂಖ್ಯೆ:ಇಡಿ100 ಪಿಟಿಐ 2001, ದಿನಾಂಕ: 27.07.2001 ರಲ್ಲಿ ವಿಧಿಸಲಾಗಿದ್ದ ಷರತ್ತುಗಳನ್ನು ಅನುಸರಿಸಿ ಹೊಸದಾಗಿ ವಿಜ್ಞಾನ ಶಿಕ್ಷಕರ ತರಬೇತಿ ಸಂಸ್ಥೆಗಳನ್ನು